ಓ ಎಸ್ ನಂ.59/2023

ಪಿ.ಡಬ್ಲ್ಯೂ-1 ಮಹೇಶ ತಂದೆ ಸಂಗಮೇಶ್ವರ ಪಾಟೀಲ್

**(ಇಂದು ದಿನಾಂಕಃ 24-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ಸರ್ವೆ ನಂಬರ ೪೫ ಸುಮಾರು ೨೧ ರಿಂದ ೨೨ ಎಕರೆ ಇರಬಹುದು. ಸರ್ವೆ ನಂಬರ ೨೫ ರ ೮ ಎಕರೆ ೩೨ ಗುಂಟೆ ಇರುತ್ತದೆ. ನಮ್ಮ ಕುಟುಂಬಕ್ಕೆ ಸರ್ವೆ ನಂಬರ ೨೪ ರ ಜಮೀನು ಕೂಡಾ ಇರುತ್ತದೆ. ಸಾಕ್ಷಿಯು ಅದನ್ನು ನಾವು ನಮ್ಮ ತಂಗಿಗೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ಸರ್ವೆ ನಂಬರ ೨೪ ಇದು ೬ ಎಕರೆ ೧೦ ಗುಂಟೆ ಇರುತ್ತದೆ. ಸರ್ವೆ ನಂಬರ ೪೫ ರ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ ೨೫ ರ ಚೆಕ್ಕುಬಂದಿ ಕೂಡಾ ನನಗೆ ಗೊತ್ತಿಲ್ಲ ಎಂದರೆ ಸರಿ. ಇನ್ನೊಂದು ಸರ್ವೆ ನಂಬರ ೪೧ ರೇವೂರ ಕೆ ಗ್ರಾಮದಲ್ಲಿ ನಮಗೆ ಬರುವುದು ಇರುತ್ತದೆ. ಅಂಕಲೇಶ್ವರದಲ್ಲಿ ಒಂದು ಜಮೀನು ಇದ್ದು, ಅದರ ಸರ್ವೆ ನಂಬರ ನನಗೆ ಹೇಳಲು ಗೊತ್ತಿಲ್ಲ. ನಮಗೆ ಮನೆ ಕೂಡಾ ಇರುತ್ತದೆ, ಅದು ರೇವೂರ ಬಿ ಗ್ರಾಮದಲ್ಲಿರುತ್ತದೆ. ಮನೆ ನಂಬರ ನನಗೆ ಗೊತ್ತಿಲ್ಲ. ಮನೆಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

೨. ಸರ್ವೆ ನಂಬರ ೪೫ ರಲ್ಲಿ ೩ ಹಿಸ್ಸೆಗಳು ಆಗಿರುತ್ತವೆ. ಸರ್ವೆ ನಂಬರ ೪೫/೧ ಇದು ೧ನೇ ಪ್ರತಿವಾದಿಯ ಹೆಂಡತಿ ಸಾತಮ್ಮರವರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ ೪೫/೨ ಇದು ೫ ಎಕರೆ ಇದ್ದು, ಅದು ೧ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ ೪೫/೩ ಕೂಡಾ ೧ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ ೪೫/೧ ರ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ೧ನೇ ಪ್ರತಿವಾದಿ ರಮೇಶ, ಪಶ್ಚಿಮಕ್ಕೆ ಕೂಡಾ ೧ನೇ

ಪ್ರತಿವಾದಿ ರಮೇಶ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ಸರ್ವೆ ನಂಬರ ೪೫/೨ ರ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ೧ನೇ ಪ್ರತಿವಾದಿ ರಮೇಶ, ಪಶ್ಚಿಮಕ್ಕೆ ೨ನೇ ಪ್ರತಿವಾದಿ ಸಾತಬಾಯಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ಸರ್ವೆ ನಂಬರ ೪೫/೩ ರ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ೧ನೇ ಪ್ರತಿವಾದಿ ರಮೇಶ, ಪಶ್ಚಿಮಕ್ಕೆ ೨ನೇ ಪ್ರತಿವಾದಿ ಸಾತಬಾಯಿ ಇರಬಹುದು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ಸಾಕ್ಷಿಯು ಸರ್ವೆ ನಂಬರ ೪೫/೪ ನನ್ನದು ಇರುತ್ತದೆ ಎನ್ನುತ್ತಾರೆ. ನನ್ನ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಯಶವಂತರಾಯ ಉಡಗಿ, ಪಶ್ಚಿಮಕ್ಕೆ ೧ನೇ ಪ್ರತಿವಾದಿ ರಮೇಶ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ನಾನು ದಾವೆಯಲ್ಲಿ ಸರ್ವೆ ನಂಬರ ೪೫ ರಲ್ಲಿ ೪ ಭಾಗ ಮತ್ತು ಚೆಕ್ಕುಬಂದಿಗಳನ್ನು ಬರೆಸಿರುತ್ತೇನೆ.

೩. ಸರ್ವೆ ನಂಬರ ೨೫ ರಲ್ಲಿ ೨ ಭಾಗಗಳು ಆಗಿರುತ್ತವೆ. ಆ ರೀತಿ ೨ ಭಾಗಗಳಿರುವ ಕುರಿತು ದಾವೆಯಲ್ಲಿ ತಿಳಿಸಿರುತ್ತೇನೆ. ನಾನು ಆ ರೀತಿ ಭಾಗಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ ೨೫/೧ ೩ನೇ ಪ್ರತಿವಾದಿಯಾದ ಮತ್ತು ನನ್ನ ಹೆಂಡತಿಯಾದ ಮಾಯಾದೇವಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ ೨೫/೨ ರ ೨ ಎಕರೆ ೩೦ ಅಥವಾ ೩೮ ಗುಂಟೆ ಜಮೀನು ೧ನೇ ಪ್ರತಿವಾದಿ ರಮೇಶರವರ ಹೆಸರಿನಲ್ಲಿ ಇರುತ್ತದೆ. ಪಾಲು ಆದ ಮೇಲೆ ನಮ್ಮ ಹೆಸರು ಪಹಣಿಯಲ್ಲಿ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿಯು ಸರಿಯಾಗಿ ಪಾಲು ಆಗಿರುವುದಿಲ್ಲ ಎನ್ನುತ್ತಾರೆ. ಸರ್ವೆ ನಂಬರ ೨೪ ರ ಜಮೀನು ಕೂಡಾ ನಮ್ಮ ಒಟ್ಟು ಕುಟುಂಬದ ಆಸ್ತಿ ಇದ್ದು, ಅದನ್ನು ದಾವೆಯಲ್ಲಿ ನಾವು ತೋರಿಸಿಲ್ಲ ಎಂದರೆ ಸರಿ. ಸರ್ವೆ ನಂಬರ ೪೧ ನಮ್ಮ ಹಿರಿಯರಿಂದ ಬಂದ ಜಮೀನು ಇದ್ದು, ಅದನ್ನೂ ಕೂಡಾ ನಾವು ದಾವೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ನನ್ನ ತಂಗಿಯಾದ ಲಕ್ಷ್ಮೀರವರನ್ನೂ ಕೂಡಾ ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

೪. ರೇವೂರನಲ್ಲಿರುವ ಮನೆಯ ನಂಬರ ನನಗೆ ಗೊತ್ತಿಲ್ಲ, ಆದರೆ ಚೆಕ್ಕುಬಂದಿ ನನಗೆ ಗೊತ್ತು. ಸದರಿ ಮನೆ ನಂಬರ ಮತ್ತು ಚೆಕ್ಕುಬಂದಿ ನಾನು ದಾವೆಯಲ್ಲಿ ತೋರಿಸಿರುವುದಿಲ್ಲ. ಮನೆಯ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಮನೆಯಲ್ಲಿ ನಾನು ಮತ್ತು ೧ನೇ ಪ್ರತಿವಾದಿ ಭಾಗ ಮಾಡಿಕೊಂಡು ಅರ್ಧ-ಅರ್ಧ ಮನೆಯಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ನಾನು ೪ ಕೋಣೆಯಲ್ಲಿ ಮತ್ತು ೧ನೇ ಪ್ರತಿವಾದಿ ೪ ಕೋಣೆಯಲ್ಲಿ ವಾಸ ಇರುತ್ತೇವೆ ಎಂದು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ೧ನೇ ಪ್ರತಿವಾದಿ ಬೇರೆ-ಬೇರೆಯಾಗಿ ವಾಸ ಇರುತ್ತೇವೆ ಎಂದರೆ ಸರಿ. ನನ್ನ ಹೆಸರಿನಲ್ಲಿರುವ ಜಮೀನನ್ನು ನಾನು ಸಾಗುವಳಿ ಮಾಡುತ್ತೇನೆ ಮತ್ತು ೧ನೇ ಪ್ರತಿವಾದಿ ತನ್ನ ಹೆಸರಿನಲ್ಲಿರುವ ಜಮೀನನ್ನು ಅವರು ಸಾಗುವಳಿ ಮಾಡುತ್ತಾರೆ ಎಂದರೆ ಸರಿ.

೫. ನನ್ನ ಪಾಲಿಗೆ ಬಂದ ಜಮೀನನ್ನು ನನ್ನ ಹೆಂಡತಿಯ ಹೆಸರಿನಲ್ಲಿ ಮತ್ತು ೧ನೇ ಪ್ರತಿವಾದಿ ಪಾಲಿಗೆ ಬಂದ ಜಮೀನನ್ನು ಅವರು ಅವರ ಹೆಂಡತಿಯ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಾವು ಖುದ್ದಾಗಿ ಮಾಡಿರುವುದಿಲ್ಲ ನಮ್ಮ ತಂದೆ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಹೆಂಡತಿ ಮತ್ತು ೧ನೇ ಪ್ರತಿವಾದಿಯ ಹೆಂಡತಿಯ ಹೆಸರಿನಲ್ಲಿ ಜಮೀನು ಇರುವ ಕಾರಣ ನಾನು ಅವರನ್ನು ೨ ಮತ್ತು ೩ನೇ ಪ್ರತಿವಾದಿಗಳಾಗಿ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ.

೬. ಸರ್ವೆ ನಂಬರ ೨೪ ರ ೬ ಎಕರೆ ೧೦ ಗುಂಟೆ ಜಮೀನನ್ನು ನಮ್ಮ ತಂಗಿ ಲಕ್ಷ್ಮೀಗೆ ನೀಡಿದ ಕಾರಣ ಅವಳನ್ನು ಈ ದಾವೆಯಲ್ಲಿ ನಾನು ಸೇರ್ಪಡೆ ಮಾಡಿರುವುದಿಲ್ಲ. ನನ್ನ ಪಾಲಿಗೆ ಬಂದ ಸರ್ವೆ ನಂಬರ ೪೫ ರಲ್ಲಿ ೨ ಎಕರೆ ಜಮೀನು ನಾನು ಯಶವಂತರಾಯರವರಿಗೆ ಖರೀದಿ ನೀಡಿರುತ್ತೇನೆ ಎಂದರೆ ಸರಿ. ಅಕ್ಟೋಬರ-2022 ರಲ್ಲಿ

ನಾನು ಸದರಿ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ೧ನೇ ಪ್ರತಿವಾದಿ ಕೂಡಾ ಪದ್ಮಾವತಿ ವಡಗೇರರವರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ. ನಾನು ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ೧ನೇ ಪ್ರತಿವಾದಿ ರಮೇಶನು ಪದ್ಮಾವತಿರವರಿಗೆ ೪ ಎಕರೆ ೧೬ ಗುಂಟೆ ಜಮೀನು ಮಾರಾಟ ಮಾಡಿದ್ದ. ಸಾಕ್ಷಿಯು ೧ನೇ ಪ್ರತಿವಾದಿ ಸದರಿ ಜಮೀನನ್ನು ಮರಳಿ ಖರೀದಿಸಿರುತ್ತಾರೆ ಎನ್ನುತ್ತಾರೆ. ಸದರಿ ಖರೀದಿ ಪತ್ರವನ್ನೂ ಕೂಡಾ ನಾನು ಹಾಜರುಪಡಿಸಿರುತ್ತೇನೆ.

೭. ಸರ್ವೆ ನಂಬರ ೪೫/೩ ರ ೪ ಎಕರೆ ೧೬ ಗುಂಟೆ ಇರುತ್ತದೆ. ಸದರಿ ಜಮೀನಿನ ಕುರಿತು ಪಾಲು ಆದ ನಂತರ ಬೇರೆ-ಬೇರೆ ವ್ಯವಹಾರಗಳು ಆಗಿರುತ್ತವೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.